CC No.1074/18
CW-8 PW-5

**ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ**
**CC No : 1074/2018**

| | | |
|---|---|---|
| ಸಾಕ್ಷಿದಾರರ ಹೆಸರು | : | ಚೈತನ್ಯ ಕೆ |
| ತಂದೆಯ ಹೆಸರು | : | ಮರಿಸ್ವಾಮಿ ಬಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಪಿಐ, ಜೆ.ಸಿ. ನಗರ ಪೊಲೀಸ್ ಠಾಣೆ, ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: **ದಿಃ 06.01.2026**

ನಾನು 13.10.2017ರಿಂದ ದಿಃ21.08.2019ರವರೆಗೆ ಚನ್ನಪಟ್ಟಣ ಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಠಾಣಾ ಪ್ರಭಾರೆಯಲ್ಲಿದ್ದಾಗ ಪಿರ್ಯಾದುದಾರರಾದ ಚಾಸಾ.1 ರವರು ಚುನಾವಣಾ ಪಿಎಲ್‌ಡಿ ಬ್ಯಾಂಕ್, ಚನ್ನಪಟ್ಟಣ ಚುನಾವಣಾ ಅಧಿಕಾರಿಯಾಗಿ ನೇಮಕಗೊಂಡಿದ್ದು ಸದರಿಯವರು ದಿಃ26.08.2018ರಂದು ಮಧ್ಯಾಹ್ನ 15.10 ನಿಮಿಷಕ್ಕೆ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆಃ45/2018ರಲ್ಲಿ ಜನಪ್ರತಿನಿಧಿ ಕಾಯಿದೆ ಕಲಂ 136, ಐಪಿಸಿ ಕಲಂ 506 ಮತ್ತು 353ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಪಿರ್ಯಾದು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಪಿರ್ಯಾದಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವ.ಯನ್ನು ನಿ.ಪಿ.7 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

3. ಪಿರ್ಯಾದು ನೀಡಿದ ದಿನವೇ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರುದಾರರಾದ ಚಾಸಾ.2 ಮತ್ತು ಚಾಸಾ.3ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾಮೆ ಜರುಗಿಸಿ ಸ್ಥಳದಲ್ಲಿ ಚಾಸಾ.1ರವರು ಹಾಜರುಪಡಿಸಿದ ಕಬ್ಬಿಣದ ಮತಪೆಟ್ಟಿಗೆ ಮತ್ತು ಮತಪತ್ರಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಂಜೆ 4.15ರಿಂದ 4.45ರವರೆಗೆ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸ್ಥಳ ಪಂಚನಾಮೆ ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದ್ದು, ಸ್ಥಳ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಡಿ) ಎಂದು

ಗುರುತಿಸಲಾಯಿತು. ಮತಪೆಟ್ಟಿಗೆಯನ್ನು ನಮ್ಮ ಠಾಣಾ ಮಾಲುಪಟ್ಟಿ ಸಂಖ್ಯೆ.26/2018 ಎಂದು ನಮೂದಿಸಿಕೊಂಡಿರುತ್ತೇನೆ. ಮಾಲುಪಟ್ಟಿಯನ್ನು ನಿ.ಪಿ.8 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಮಯ ಸುಮಾರು 17.30ರಿಂದ 18.20 ಗಂಟೆ ಸಮಯದಲ್ಲಿ ಚಾಸಾ.2 ಮತ್ತು 4ರವರ ಸಮಕ್ಷಮ ಆರೋಪಿಯ ಅಂಗಶೋಧನೆ ಕ್ರಮ ಜರುಗಿಸಿ ಆತನ ಬಳಿ ಇದ್ದ ನೀಲಿಬಣ್ಣದ ಗಾಜಿನ ಇಂಕ್ ಬಾಟಲಿಯನ್ನು ಮತ್ತು ತುಂಬುತೋಳಿನ ಬಿಳಿಬಣ್ಣದ ಅಂಗಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಅಂಗಿ ಮತ್ತು ಇಂಕಿನ ಬಾಟಲಿಯನ್ನು ಈಗಾಗಲೇ ಮೇಲೆ ಹೇಳಿದ ಠಾಣಾ ಮಾಲುಪಟ್ಟಿ ಸಂಖ್ಯೆ.26/2018ರಲ್ಲಿ ನಮೂದಿಸಿಕೊಂಡಿರುತ್ತೇನೆ. ಅಂಗಶೋಧನಾ ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.6 ಮತ್ತು 7ರವರ ಹೇಳಿಕೆಗಳನ್ನು ಪಡೆದು ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

4. ದಿಃ20.09.2018ರಂದು ಚಾಸಾ.1 ಮತ್ತು 2ರವರು ಚುನಾವಣಾ ಕರ್ತವ್ಯಕ್ಕೆ ನೇಮಕಗೊಂಡ ಬಗ್ಗೆ ತಹಶೀಲ್ದಾರ್, ಚನ್ನಪಟ್ಟಣರವರಿಂದ ಆದೇಶದ ಪ್ರತಿಯನ್ನು ಪಡೆದು ಈ ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆ ಈಗಾಗಲೇ ನಿ.ಪಿ.5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ನಂತರ ಈ ಕೇಸಿನ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಅಂತಿಮ ವರದಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಮು.ಮಾ.1 ಮತಪೆಟ್ಟಿಗೆ ಮತ್ತು ಮು.ಮಾ.2 ಇಂಕು ಬಾಟಲಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಇಂಕು ಆಗಿರುವ ಬಿಳಿಬಣ್ಣದ ಅಂಗಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ. ಎಂ.ಕೆ.ಎನ್.,ವಕೀಲರಿಂದಃ**

ದಿಃ16.08.2018ರಂದು ಆರೋಪಿ ಮತ್ತು ಆತನ ತಂದೆ ರಾಮಚಂದ್ರ ಮತಚಲಾಯಿಸಲು ಬಂದಿದ್ದರು ಎಂದು ಚಾಸಾ.1ರವರು ಪಿರ್ಯಾದು ದಾಖಲು ಮಾಡಿದ್ದು ಆರೋಪಿಯ ತಂದೆಗೆ ಸೇರಿದ ಮತ ಇತ್ತು ಎಂಬುದರ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿ ಚುನಾವಣೆಯಲ್ಲೂ ಸಂಬಂಧಪಟ್ಟ ವ್ಯಾಪ್ತಿಯ ಪೊಲೀಸ್ ಠಾಣೆಯಿಂದ ಪೊಲೀಸರನ್ನು ಚುನಾವಣಾ ಕರ್ತವ್ಯಕ್ಕೆ ನೇಮಿಸಲಾಗಿರುತ್ತದೆ ಎಂದರೆ ಸರಿ. ಚಾಸಾ.7ರವರು ಚುನಾವಣಾ ಕರ್ತವ್ಯಕ್ಕೆ ನೇಮಕಗೊಂಡಿದ್ದರು ಎಂದು ತಾವು ಅಂತಿಮ ವರದಿಯಲ್ಲಿ

ನಮೂದಿಸಿಕೊಂಡಿದ್ದು ಸದರಿಯವರು ಘಟನೆ ಸಂಬಂಧ ಠಾಣೆಗೇನಾದರೂ ಮಾಹಿತಿ ನೀಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ಚಾಸಾ.1ರವರೇ ಪಿರ್ಯಾದು ದಾಖಲು ಮಾಡಿರುತ್ತಾರೆ ಎನ್ನುತ್ತಾರೆ. ಚುನಾವಣಾ ಕರ್ತವ್ಯದಲ್ಲಿದ್ದಾಗ ಏನಾದರೂ ಅಹಿತಕರ ಘಟನೆ ನಡೆದರೆ ತಕ್ಷಣ ಠಾಣೆಗೆ ಮಾಹಿತಿ ನೀಡಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿದು ಚಾಸಾ.1ರವರೇ ಬಂದು ಮಾಹಿತಿ ನೀಡಿರುತ್ತಾರೆ ಎನ್ನುತ್ತಾರೆ. ಚನ್ನಪಟ್ಟಣ ಪಿಎಲ್‌ಡಿ ಬ್ಯಾಂಕ್ ಚುನಾವಣೆ ಯಾವ ಮತಗಟ್ಟೆಯಲ್ಲಿ ನಡೆಯುತ್ತಿತ್ತು ಎಂದರೆ ಸಾಕ್ಷಿ ಚನ್ನಪಟ್ಟಣದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜು ಕೊಠಡಿ ಸಂಖ್ಯೆ.6 ಎಂದು ನುಡಿಯುತ್ತಾರೆ. ತಾವು ಘಟನೆ ನಡೆಯಿತು ಎಂದು ಹೇಳಿದ ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಯಾರಾದರೂ ಇದ್ದರಾ ಎಂದರೆ ಸಾಕ್ಷಿ ಇರಲಿಲ್ಲ ಎನ್ನುತ್ತಾರೆ. ಪಂಚರುದಾರರಿಗೆ ತಾವು ನೋಟೀಸ್ ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಲಿಖಿತ ನೋಟೀಸ್ ಕೊಟ್ಟಿಲ್ಲ, ಮೌಖಿಕವಾಗಿ ಹೇಳಿ ಕೇಳಿ ಒಪ್ಪಿದ ಮೇರೆಗೆ ಚಾಸಾ.2 ಮತ್ತು 3ರವರನ್ನು ಪಂಚರುದಾರರನ್ನಾಗಿ ಬರಮಾಡಿಕೊಂಡಿದ್ದೆವು ಎನ್ನುತ್ತಾರೆ. ತಾವು ಮತಪತ್ರಗಳನ್ನು ಏನಾದರೂ ಅಮಾನತ್ತುಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ, ಆದರೆ ಎಷ್ಟು ಮತಪತ್ರಗಳು ಎಂದು ಎಣಿಕೆ ಮಾಡಿಲ್ಲ ಎನ್ನುತ್ತಾರೆ. ಎಷ್ಟು ಮತಪತ್ರಗಳಿಗೆ ಇಂಕು ಆಗಿತ್ತು ಎಂದರೆ ಸಾಕ್ಷಿ, ನೋಡಿಲ್ಲ ಎನ್ನುತ್ತಾರೆ. ತಮ್ಮ ಅಂತಿಮ ವರದಿಯಲ್ಲಿ ಸದರಿ ಚುನಾವಣೆಯ ಅಭ್ಯರ್ಥಿಗಳು ಯಾರ್ಯಾರು ಆಗಿದ್ದರು ಎಂದು ನಮೂದಿಸಿಲ್ಲ ಎಂದರೆ ಸರಿ. ಮತಪೆಟ್ಟಿಗೆ ಮತಪತ್ರದಲ್ಲಿ ಯಾವ ಬಣ್ಣದ ಇಂಕು ಬಿದ್ದಿತ್ತು ಎಂದು ನಮೂದು ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ನೀಲಿಬಣ್ಣದ್ದು ಎಂದು ನುಡಿಯುತ್ತಾರೆ. ನಿ.ಪಿ.2 ಅಂಗಶೋಧನೆ ಪಂಚನಾಮೆಯಲ್ಲಿ ಕಪ್ಪು ಬಣ್ಣದ ಶಾಹಿಯನ್ನು ಅಮಾನತ್ತುಪಡಿಸಿಕೊಂಡಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿ. ಅಮಾನ್ತುಪಡಿಸಿಕೊಂಡಿರುವ ಇಂಕು "ಬಿಲ್" ಎಂಬ ಹೆಸರಿನ ಕಂಪನಿ ಹೆಸರು ಇದೆ ಎಂದರೆ ಸರಿ. ಅಂಗಿಯಲ್ಲಿ ಆಗಿರುವ ಬಣ್ಣ ನೀಲಿ ಎಂದರೆ ಸರಿ. ಅಂಗಿಯ ಯಾವ ಯಾವ ಭಾಗಕ್ಕೆ ಇಂಕು ಆಗಿತ್ತು ಎಂದು ಮಹಜರ್ ನಲ್ಲಿ ಹೇಳಿಲ್ಲ ಎಂದರೆ ಸರಿ. ಚಾಸಾ.1ರವರು ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲು ಮಾಡುವ ಉದ್ದೇಶದಿಂದ ಯಾವುದೋ ಮತಪೆಟ್ಟಿಗೆಯನ್ನು ನನ್ನ ಮುಂದೆ ಹಾಜರುಪಡಿಸಿದ್ದು ಅದರ ಆಧಾರದ ಮೇಲೆ ಆರೋಪಿಯ ಮೇಲೆ ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1ರವರು ನೀಡಿದ ಸುಳ್ಳು ದೂರಿನನ್ವಯ ನಾನು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ತನಿಖೆಯನ್ನು ಕೈಗೊಂಡು, ಸುಳ್ಳು ಅಂತಿಮ ವರದಿ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಲ್ಲಿ ನಮೂದಿಸಿರುವ ಯಾವುದೇ

ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪಂಚರುದಾರರ ಸಮಕ್ಷಮ ಪಂಚನಾಮೆ ಮಾಡಿ ಮು.ಮಾ.1ರಿಂದ 3 ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಅಂಗಶೋಧನೆ ಮಾಡಿ ಶಾಹಿ ಬಾಟಲ್ ಮತ್ತು ಅಂಗಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತಪೆಟ್ಟಿಗೆಯನ್ನು ತೆರೆದು ನೋಡಲಾಗಿ ಅದರಲ್ಲಿ ಇದ್ದ ಮತಪತ್ರಗಳು ಇಂದು ಆಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಈ ಕೇಸಿನಲ್ಲಿ ಹೇಳಿರುವ ಕೃತ್ಯದಲ್ಲಿ ಭಾಗಿಯಾಗದೇ ಇದ್ದರೂ ಆತನ ವಿರುದ್ದ ಸುಳ್ಳು ಕೇಸನ್ನು ದಾಖಲು ಮಾಡಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆ ನೀಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.